ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಂಗವಿಕಲರ ಆದಾಯದ ಮಿತಿಯನ್ನು ಹೆಚ್ಚಿಸುವುದು

76 (884) ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ) :– ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಅಂಗವಿಕಲರ ವೇತನಕ್ಕಾಗಿ 6,400 ಆದಾಯದ ಮಿತಿಯನ್ನು ನಿಗದಿಪಡಿಸಲಾಗಿದ್ದು, ಇದು ಬಹಳ ಕಡಿಮೆ ಇರುವುದರಿಂದ ರಾಜ್ಯದ ಬಹಳಷ್ಟು ಅಂಗವಿಕಲರಿಗೆ ಪ್ರಯೋಜನ ಸಿಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಆದಾಯ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

(ಇ) ಹಾಗಿದ್ದಲ್ಲಿ, ಆದಾಯ ಮಿತಿಯನ್ನು ಯಾವಾಗ ಹೆಚ್ಚಿಸಲಾಗುವುದು?

ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಮುಖ್ಯಮಂತ್ರಿಯವರು

(ಅ) ಹೌದು, ಆದುದರಿಂದ ಆದಾಯ ಮಿತಿಯನ್ನು ಹೆಚ್ಚಿಸಲಾಗಿದೆ.

(ಆ) ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ:– ಕಂಇ 35 ಡಿಎಸ್‌ಪಿ 2011, ಬೆಂಗಳೂರು, ದಿನಾಂಕ: 24–05–2011 ರನ್ವಯ ಹೆಚ್ಚಿಸಲಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ:– ಕಂಇ 35 ಡಿಎಸ್‌ಪಿ 2011, ಬೆಂಗಳೂರು, ದಿನಾಂಕ: 24–05–2011 ರನ್ವಯ ನಿರ್ಗತಿಕ ವಿಧವಾ ಮಾಸಾಶನ ಹಾಗೂ ಅಂಗವಿಕಲ ಮಾಸಾಶನ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ರೂ. 6000/– ಆದಾಯದ ಮಿತಿಯನ್ನು ಗ್ರಾಮೀಣಾ ಪ್ರದೇಶಗಳಲ್ಲಿ ರೂ 12,000/– ಹಾಗೂ ನಗರ ಪ್ರದೇಶಗಳಲ್ಲಿ ರೂ. 17000/–ಕ್ಕೆ ಹೆಚ್ಚಿಸಲಾಗಿದೆ (ಪ್ರತಿಯನ್ನು ಲಗತ್ತಿಸಿದೆ)

(ಇ) ಅನ್ವಯಿಸುವುದಿಲ್ಲ.

ಕಂದಾಯ ಸಚಿವಾಲಯ

ವಿಷಯ: ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ರೂ. 6000/– ಆದಾಯದ ಮಿತಿಯನ್ನು ಗ್ರಾಮೀಣಾ ಪ್ರದೇಶಗಳಲ್ಲಿ ರೂ. 12,000/– ಗ್ರಾಮೀಣಾ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ರೂ. 17,000/– ಕ್ಕೆ ಹೆಚ್ಚಿಸಲಾಗಿರುವ ಬಗ್ಗೆ.

ಓದಲಾಗಿದೆ : 1. ಸಚಿವ ಸಂಪುಟದ ಪ್ರಕರಣ ಸಂಖ್ಯೆ:– ಸಿ: 199:2011, ದಿನಾಂಕ:–21.04.2011

2. ಸರ್ಕಾರಿ ಆದೇಶ ಸಂ: ಅನಾಸ 244 ಡಿಆರ್‌ಎ 2006, ದಿನಾಂಕ:– 09.10.2006

3. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 5 ಎಸ್‌ಡಬ್ಲ್ಯೂ 84, ದಿನಾಂಕ: 5/8 ಮಾರ್ಚ್ 1984.

4. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 146 ಪಿಹೆಚ್‌ಪಿ 77, ದಿನಾಂಕ:– 07.11.1977.

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1) ರನ್ವಯ ಕರ್ನಾಟಕ ಸಚಿವ ಸಂಪುಟವು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಬಾಂಡ್‌ಗಳ ವಿತರಣೆಗಾಗಿ, ವೃದ್ಧಾಪ್ಯ ಪಿಂಚಣಿ ವಿತರಿಸುವ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಎಲ್ಲಾ ಫಲಾನುಭವಿಗಳು ಮೂಲ ಬಿಪಿಎಲ್ ಕಾರ್ಡ್ ಅಥವಾ ಆದಾಯ ಪ್ರಮಾಣ ಪತ್ರದ ಎರಡನ್ನೂ ಕಡ್ಡಾಯವಾಗಿ ಹೊಂದಿರಬೇಕು ಎಂಬ ಷರತ್ತನ್ನು ಸುತ್ತೋಲೆಯ ಮೂಲಕ ವಿಧಿಸಿರುವ ಬಗ್ಗೆ ಚರ್ಚಿಸಿ, ಇಂತಹ ನಿರ್ಬಂಧಗಳನ್ನು ದಿನಾಂಕ:– 31.03.2011ಕ್ಕಿಂತ ಮುಂಚೆ ಪಡೆದಿರುವ ಅಥವಾ ನೊಂದಾಯಿಸಿಕೊಂಡಿರುವ ಫಲಾನುಭವಿಗಳಿಗೆ ಅನ್ವಯ ಆಗಬಾರದೆಂದು ನಿರ್ಧರಿಸಿದೆ, ಮತ್ತು ದಿನಾಂಕ: 01.04.2011 ರ ನಂತರ ಇಂತಹ ಯೋಜನೆಗಳಿಗೆ ಗುರುತಿಸಬಹುದಾದ ಫಲಾನುಭವಿಗಳು ಬಿಪಿಎಲ್ ಕಾರ್ಡ್‌ನ್ನು ಮಾತ್ರ ಕಡ್ಡಾಯವಾಗಿ ಸಲ್ಲಿಸುವ ಷರತ್ತನ್ನು ನಿಗದಿಪಡಿಸಬೇಕೆಂದು ಸಚಿವ ಸಂಪುಟವು ನಿರ್ಧರಿಸಿತು. ಅದರಂತೆ, ಬಿಪಿಎಲ್ ಕಾರ್ಡ್‌ನ್ನು ಪಡೆಯಲು ಮೇಲೆ ಓದಲಾದ ಉಲ್ಲೇಖ (2)ರನ್ವಯ ಅರ್ಜಿದಾರರ ಆದಾಯ ಮಿತಿಯನ್ನು

ರೂ. 12,000 ಗ್ರಾಮೀಣಾ ಪ್ರದೇಶಗಳಲ್ಲಿ ಮತ್ತು ರೂ. 17,000/– ನಗರ ಪ್ರದೇಶಗಳಲ್ಲಿ ನಿಗದಿಪಡಿಸಲಾಗಿರುತ್ತದೆ. ಮೇಲೆ ಓದಲಾದ ಉಲ್ಲೇಖ (3) ರನ್ವಯ ನಿರ್ಗತಿಕ ವಿಧವಾ ವೇತನದಡಿ ಹಾಗೂ ಉಲ್ಲೇಖ (4) ರನ್ವಯ ಅಂಗವಿಕಲ ವೇತನದಡಿ ಆದಾಯ ಮಿತಿಯನ್ನು ರೂ. 6000/– ಗಳು ಎಂದು ನಿಗದಿಪಡಿಸಲಾಗಿರುತ್ತದೆ. ಸಚಿವ ಸಂಪುಟದ ನಿರ್ಣಯದಂತೆ, ಆದಾಯ ಪ್ರಮಾಣ ಪತ್ರದ ಬದಲು ಬಿಪಿಎಲ್ ಪಡಿತರ ಚೀಟಿಯನ್ನು ಮಾತ್ರ ಪರಿಗಣಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಬಿಪಿಎಲ್ ಪಡಿತರ ಚೀಟಿಯ ಮಾನದಂಡಕ್ಕೆ ಸರಿ ಹೊಂದುವಂತೆ ನಿರ್ಗತಿಕ ವಿಧವಾ ವೇತನದಡಿ ಹಾಗೂ ಅಂಗವಿಕಲ ವೇತನದಡಿ ಪ್ರಯೋಜನೆ ಪಡೆಯಲು ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ರೂ. 12,000/– ಹಾಗೂ ನಗರ ಪ್ರದೇಶಗಳಲ್ಲಿ ರೂ. 17,000/– ಎಂದು ನಿಗದಿಪಡಿಸಿ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:– ಕಂ.ಇ.35 ಡಿಎಸ್‌ಪಿ 2011, ಬೆಂಗಳೂರು,

ದಿನಾಂಕ:–24–05–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

1. ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ಆದಾಯದ ಮಿತಿಯನ್ನು ರೂ. 6000/– (ಆರು ಸಾವಿರದಿಂದ) ದಿಂದ, ಗ್ರಾಮೀಣಾ ಪ್ರದೇಶಗಳಲ್ಲಿ, ರೂ. 12,000/– (ರೂ. ಹನ್ನೆರಡು ಸಾವಿರಕ್ಕೆ) ಕ್ಕೆ ಗ್ರಾಮೀಣಾ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ರೂ. 17,000/– (ರೂ. ಹದಿನೇಳು ಸಾವಿರಕ್ಕೆ)ಕ್ಕೆ ಹೆಚ್ಚಿಸಲಾಗಿರುತ್ತದೆ.

2. ಅರ್ಜಿದಾರರು ಯೋಜನೆಗಳಡಿ ಮಾಶಾಸನಕ್ಕಾಗಿ ಅರ್ಜಿ ಸಲ್ಲಿಸುವಾಗ ಆದಾಯ ಪ್ರಮಾಣ ಪತ್ರದ ಬದಲು ಬಿಪಿಎಲ್ ಪಡಿತರ ಚೀಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.

3. ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನವನ್ನು ಮಂಜೂರು ಮಾಡುವ ಮೊದಲು ಅರ್ಜಿದಾರರು ನೀಡಿರುವ ವಿವರಗಳನ್ನು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ ನಡೆಸಿ, ಅರ್ಜಿದಾರರು ಬಿಪಿಎಲ್ ಪಡಿತರ ಚೀಟಿ ಪಡೆಯಲು

ಅರ್ಹರು ಹಾಗೂ ಅರ್ಜಿದಾರರ ಆದಾಯ ಮಿತಿಯು ಯೋಜನೆಯಡಿ ನಿಗದಿ ಪಡಿಸಿರುವಂತೆ ಸರಿಯಾಗಿದೆಯೆಂದು ದೃಢೀಕರಿಸತಕ್ಕದ್ದು.

4. ಮಾಶಾಸನ ಮಂಜೂರಾತಿ ಅಧಿಕಾರಿಗಳಾದ ಸಂಬಂಧಪಟ್ಟ ತಹಶೀಲ್ದಾರರು ಹಾಗೂ ನಾಡಕಛೇರಿಯ ಉಪ ತಹಶೀಲ್ದಾರರು ಬಿಪಿಎಲ್ ಪಡಿತರ ಚೀಟಿ ಹಾಗೂ ರಾಜಸ್ವ ನಿರೀಕ್ಷಕರ ವರದಿಯಲ್ಲಿ ಅನುಮಾನಸ್ಪದ ಅಂಶಗಳಿದ್ದಲ್ಲಿ ಖುದ್ದು ಸಂದರ್ಶನ ನಡೆಸಿ ಯೋಜನೆಗಳಡಿ ಮಾಶಾಸನ ಮಂಜೂರು ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಕಾತ್ಯಾಯಿನಿ ದೇವಿ
ಪೀಠಾಧಿಕಾರಿಗಳು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ ಕಂದಾಯ ಇಲಾಖೆ.

ಶ್ರೀ ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ಅಂಗವಿಕಲರಿಗೆ ಕೊಡುತ್ತಿರುವ ಮಾಶಾಸನದಲ್ಲಿ percentage ಏನು ಮಾಡಿದ್ದರು. ಅದು ಕಡಿಮೆ ಇತ್ತು, ಅದಕ್ಕೆ ಈಗ ಸರ್ಕಾರ 17,000 ರೂ. ಗಳಿಗೆ ಹೆಚ್ಚಿಸಿದೆಯೆಂದು ಹೇಳಿದೆ, ಅದಕ್ಕೆ ನಮಗೆ ಸಂತೋಷವಾಗಿದೆ.

ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ, ಈ ವಿಷಯವಾಗಿ ನಿನ್ನೆ ಸದನದಲ್ಲಿ detail ಆಗಿ ಚರ್ಚೆಯಾಗಿದೆ. ನಾನು ಇದಕ್ಕೆ ಸಂಬಂಧಪಟ್ಟಂತೆ ಎಲ್ಲ ವಿಷಯಗಳನ್ನು ಹೇಳಿದ್ದೇನೆ. ಈಗಾಗಲೇ ಆದಾಯ ಮಿತಿಯನ್ನು ಹೆಚ್ಚಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ 12,000ರೂ.ಗಳನ್ನು ಹಾಗೂ ನಗರ ಪ್ರದೇಶಗಳಲ್ಲಿ 17,000 ರೂಗಳಿಗೆ ಹೆಚ್ಚಿಸಲಾಗಿದೆ. ಮತ್ತೆ ವಿಶೇಷವಾಗಿ ಹೊಸ ಮಂಜೂರಾತಿಗಳನ್ನು ಮಾಡುವಂಥ ಸಂದರ್ಭಗಳಲ್ಲಿ ದಿನಾಂಕ: 24.05.2011ಕ್ಕೆ ಮಾಡಿರುವ ಹೊಸ guidelines ಪ್ರಕಾರ ಮಾಡಲಾಗುತ್ತದೆ. ಇದನ್ನು ತಹಶೀಲ್ದಾರರು, ನಾಡ ಕಛೇರಿ ಉಪ ತಹಶೀಲ್ದಾರರು ಹಾಗೂ ರಾಜಸ್ವ ನಿರೀಕ್ಷಕರು, ಏನಾದರೂ ಅನುಮಾನ ಇದ್ದರೆ ಅವೆಲ್ಲವನ್ನು verification ಮಾಡಿ ಕೊಡುವಂಥ ಕೆಲಸವನ್ನು ಕೊಡಲಾಗಿದೆ. ಈ ವಿಷಯದಲ್ಲಿ ಇಲ್ಲಿಯವರೆಗೂ ಎಲ್ಲೂ ತೊಂದರೆಯಾಗುತ್ತಿಲ್ಲ. ಎಲ್ಲವನ್ನೂ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಿನ್ನೆ ಸದನದಲ್ಲಿ ಮಾತನಾಡುವಾಗ Ageಗೆ ಸಂಬಂಧಪಟ್ಟಂತೆ ಪ್ರಶ್ನೆ ಬಂತು. ಈಗ ಕೇಂದ್ರ ಸರ್ಕಾರ Seniorsಗೆ ಕೊಡುವಂಥ

ಸಂದರ್ಭದಲ್ಲಿ 65 ವರ್ಷಗಳೆಂಬ ಪ್ರಶ್ನೆ ಬಂತು.

ಅಧ್ಯಕ್ಷರು: ಈಗ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿರುವ ಸದಸ್ಯರು ಸಮಾಧಾನವಾಗಿದೆಯೆಂದು ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ,I will clarify. ಅದನ್ನು ಕೂಡ ಪರಿಗಣನೆಗೆ ತೆಗೆದುಕೊಂಡು ತಕ್ಷಣ ಆದೇಶ ಮಾಡುವ ಬಗ್ಗೆ ಎಲ್ಲಾ ತಯಾರಿಯನ್ನು ಮಾಡಿದ್ದೇವೆ, ತಕ್ಷಣವೇ ಮಾಡುತ್ತೇವೆ.

77(758) ಮತ್ತು 78(695)

ಅಧ್ಯಕ್ಷರು: ಮಾನ್ಯ ಎ. ಮಂಜುರವರ ಮತ್ತು ಡಾ: ಹೆಚ್.ಸಿ. ಮಹದೇವಪ್ಪನವರ ಪ್ರಶ್ನೆಗಳಿಗೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ.

ವಾಹನ ದಟ್ಟಣೆಯಿಂದಾಗುತ್ತಿರುವ ಅನಾನುಕೂಲ

79 (876) ಶ್ರೀ ಹಾಲಪ್ಪ ಹೆಚ್. (ಸೊರಬ) :– ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಸುಜಾತ ಚಿತ್ರಮಂದಿರದಿಂದ ಆನಂದರಾವ್ ಸರ್ಕಲ್‌ವರೆಗೆ ಪ್ರತಿದಿನ ರಾತ್ರಿ ಹಗಲೆನ್ನದೆ ಗಂಟೆಗಟ್ಟಲೆ ವಾಹನಗಳ ಜಾಮ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಇದರಿಂದ ರಾಜ್ಯದ ಎಲ್ಲಾ ಭಾಗದಿಂದ ಬರುವ ಪ್ರಯಾಣಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಮುಖ್ಯಮಂತ್ರಿಯವರು

(ಅ) ಬಂದಿದೆ

(ಆ) ಹೌದು

(ಇ) ಬೆಂಗಳೂರಿನ ಸುಜಾತ ಚಿತ್ರಮಂದಿರ ಮತ್ತು ಓಕಳಿಪುರಂ ಜಂಕ್ಷನ್‌ನಲ್ಲಿ ಆಗುತ್ತಿರುವ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸಲು ಓಕಳಿಪುರಂ ಜಂಕ್ಷನ್‌ಯಿಂದ ಫೌಂಟನ್ ವೃತ್ತದವರೆಗೆ ಲೂಪ್‌ಗಳೊಂದಿಗೆ 8 ಪಥದ ಕಾರಿಡಾರ್ ರಸ್ತೆ ಅಂಡರ್‌ಪಾಸ್